ಕ್ರಾಪ್ ಮಾಡಿ, ಜೀನ್ಸ್ ಟಿ–ಶರ್ಟ್‌ಗಳಲ್ಲೇ ಇರುವುದನ್ನು, ತಮ್ಮ ಉಬ್ಬಿದ ಎದೆ ಕಾಣದಂತಹ ಸಡಿಲಾದ, ದಪ್ಪ ಬಟ್ಟೆ ತೊಟ್ಟವರನ್ನೂ ನೋಡುತ್ತೇವೆ. ಅಂಥವರನ್ನು ನಾವು ಅಪಹಾಸ್ಯ ಮಾಡುತ್ತೇವೆ. ಅಸಹಜ ಎನ್ನುವಂತೆ ಕಾಣುತ್ತೇವೆ.

ಜೈವಿಕವಾಗಿ ದೇಹರಚನೆಯಲ್ಲಿ ಪೂರ್ಣ ಗಂಡಸೂ ಅಲ್ಲದ, ಹೆಂಗಸೂ ಅಲ್ಲದ ದೇಹ ಹೊತ್ತು ಹುಟ್ಟುವ ಮಕ್ಕಳಿದ್ದಾರೆ. ಒಂದು ಊರಿನಲ್ಲಿ ಒಬ್ಬ ಹುಡುಗ–ಹುಡುಗಿಯ ನಡುವೆ ಪ್ರೇಮ ಸಂಬಂಧವಿತ್ತು. ಇಬ್ಬರಿಗೂ ಚಿಕ್ಕ ವಯಸ್ಸು. ಸುಮಾರು 18–20 ವರ್ಷದವರು. ಕೆಲವು ದಿನಗಳಲ್ಲಿ ಆ ಹುಡುಗನಿಗೆ ಶಿಶ್ನವೇ ಇಲ್ಲವೆಂದು ಅವರಿಗೆ ತಿಳಿಯಿತು. ಹುಡುಗನಿಗೂ ಅದರ ನಿಜವಾದ ಅರಿವು ಆದದ್ದು ಆಗಲೇ. ಬರಬರುತ್ತಾ ಆ ಹುಡುಗನಿಗೆ ತಾನು ಗಂಡಸೋ ಹೆಂಗಸೋ ತಿಳಿಯದಾಯಿತು. ಶಾಲೆ ರೆಕಾರ್ಡುಗಳಲ್ಲಿ 'ಗಂಡು' ಎಂದಿತ್ತು. ಆತ ಮಗುವಾಗಿದ್ದಾಗ ತಂದೆ ತಾಯಿಯರಿಗೆ ಇದು ತಿಳಿದಿದ್ದರೂ, ಅದಕ್ಕೆ ಬೇಕಾದ ವೈದ್ಯಕೀಯ ಸಲಹೆ, ಚಿಕಿತ್ಸೆ ತೆಗೆದುಕೊಳ್ಳುವ ವಿವೇಕ ಅವರಲ್ಲಿರಲಿಲ್ಲವೋ, ಮುಜುಗರವಾಯಿತೋ ತಿಳಿಯದು. ನಂತರ ಈ ಹುಡುಗನಲ್ಲಿ ಅತಿಯಾದ ಕೀಳರಿಮೆ ಬಂದು, ಮುಂದೆ ಬದುಕುವ ರೀತಿ ತೋಚದೇ ಮಾನಸಿಕ ಅನಾರೋಗ್ಯಕ್ಕೆ ಒಳಗಾಗಿ, ಸುಧಾರಿಸಿಕೊಳ್ಳಲು ಕೆಲವು ವರುಷಗಳೇ ಬೇಕಾದವು.

ಇಂಥ ಅದೆಷ್ಟೋ ವ್ಯಕ್ತಿಗಳು ನಮ್ಮ ನಡುವೆ ಇದ್ದಾರೆ. ಇವರಲ್ಲಿ ಅನೇಕರು ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಒಳ್ಳೆಯ ಆಸ್ಪತ್ರೆಗಳಲ್ಲಿ ಸುಧಾರಿತ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಸಾಧ್ಯವಾಗದವರು ಸ್ಥಳೀಯ ಜನರ ಬಳಿ ಅವೈಜ್ಞಾನಿಕ, ಬಹಳ ನೋವಿನಿಂದ ಕೂಡಿರುವ ಶಸ್ತ್ರಕ್ರಿಯೆ ಮಾಡಿಸಿಕೊಳ್ಳುತ್ತಾರೆ.

ಹೆಣ್ಣು ದೇಹದಲ್ಲಿ ಹುಟ್ಟಿ ತಾನು ಗಂಡಸು ಅಥವಾ ಗಂಡಸಾಗಿ, ಗಂಡಸಿನಂತೆ ಜೀವಿಸಬೇಕು ಎಂದು ಬಯಸುವವರು ಕೆಲವರು ಇರುತ್ತಾರೆ. ಹಾಗೆಯೇ ಗಂಡು ದೇಹದಲ್ಲಿ ಹುಟ್ಟಿ ಹೆಣ್ಣಾಗಿ ಜೀವಿಸಬೇಕು, ತಾನು ಹೆಣ್ಣು ಎಂದು ಅನಿಸುವವರು ಅದೆಷ್ಟೋ ಮಂದಿ ಇದ್ದಾರೆ. ಇವರಲ್ಲಿಯೂ ಅನೇಕರು ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಇದ್ಯಾವುದೂ ಅಲ್ಲದೇ ಹುಟ್ಟಿನ ಲಿಂಗರೂಪದಲ್ಲಿಯೇ, ಅದೇ ದೇಹದಲ್ಲಿ ಮುಂದುವರಿದು ಮಾನಸಿಕ ತೊಳಲಾಟದಲ್ಲೇ ಜೀವನ ಕಳೆಯುವವರೂ ಇರುತ್ತಾರೆ.

ಹೆಣ್ಣೂ ಅಲ್ಲದ, ಗಂಡೂ ಅಲ್ಲದ ವ್ಯಕ್ತಿಗಳು ಸಮಾಜದ ದೃಷ್ಟಿಯಲ್ಲಿ ಅತಿಯಾದ ಅವಹೇಳನ, ಲೇವಡಿ, ಹಿಂಸೆಗೆ ತುತ್ತಾಗುತ್ತಾರೆ. ಸಮಾಜದ ಜನರು, ಅವರ ಸ್ವಂತ ಮನೆಯವರೂ, ಪೊಲೀಸರೂ ಸೇರಿದಂತೆ, ಕಾನೂನಿನ ಅಧಿಕಾರಿಗಳು ಅಂತಹ ವ್ಯಕ್ತಿಗಳ ಮೇಲೆ ನಡೆಸುವ ಕ್ರೌರ್ಯ ಬಹಳ. ಅವರು ಮನೆಯಿಂದಲೂ ಶಾಲೆಗಳಿಂದಲೂ ಹೊರದಬ್ಬಿಸಿಕೊಂಡು – ಶಿಕ್ಷಣ, ಉದ್ಯೋಗ, ಕೊನೆಗೆ ಮನೆಯೂ ಇಲ್ಲದೆ ಭಿಕ್ಷೆಯೋ ವೇಶ್ಯಾವಾಟಿಕೆಯೋ ಮಾತ್ರ ಜೀವನೋಪಾಯಕ್ಕೆ ಅನಿವಾರ್ಯವಾಗಿಬಿಡುತ್ತದೆ.

2011ರ ಜನಗಣತಿಯಲ್ಲಿ ನಮ್ಮ ದೇಶದಲ್ಲಿ ಸುಮಾರು ಐದು ಲಕ್ಷ ಜನರು ತಮ್ಮನ್ನು ಮೂರನೇ ಲಿಂಗಕ್ಕೆ ಸೇರಿದವರೆಂದು ಗುರ್ತಿಸಿಕೊಂಡರು. ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಕಾರ್ಯಕರ್ತರು, ತಜ್ಞರ ಪ್ರಕಾರ ನಿಜವಾದ ಸಂಖ್ಯೆ ಇದರ ಆರೇಳು ಪಟ್ಟು ಹೆಚ್ಚು ಇದೆ. ಆದರೂ, ಗಣತಿಯಲ್ಲಿ ಬಹಳಷ್ಟು ಪೋಷಕರೇ ತಮ್ಮ ಮಕ್ಕಳು ಮೂರನೇ ಲಿಂಗಕ್ಕೆ ಸೇರಿದವರು ಎಂದು ದಾಖಲಿಸಿರುವುದು ಮೆಚ್ಚಬೇಕಾದ, ಗಣನೀಯ ವಿಷಯ.

## ಸುಪ್ರೀಂ ಕೋರ್ಟ್ ಬಲ

2014ರಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯ ಮೂರನೇ ಲಿಂಗವನ್ನು ಗುರುತಿಸಿತು. ಶಿಕ್ಷಣ, ಉದ್ಯೋಗ, ಸಾರ್ವಜನಿಕ ಸ್ಥಳಗಳು, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಮೂರನೇ ಲಿಂಗವನ್ನು ಗುರುತಿಸಬೇಕಾದ ಅಗತ್ಯದ ಬಗ್ಗೆ ಒತ್ತಿಹೇಳಿತು. ಮದುವೆ, ಮಕ್ಕಳ ದತ್ತು ಸೇರಿದಂತೆ ಎಲ್ಲಾ ಕಾನೂನುಗಳಲ್ಲಿ ಲಿಂಗಗಳು ಗಂಡು, ಹೆಣ್ಣು ಎರಡೇ ಎಂಬಂತೆ ಗುರುತಿಸಿರುವುದು, ಮೂರನೆಯ ಲಿಂಗಕ್ಕೆ ಸೇರಿದ ವ್ಯಕ್ತಿಗಳಿಗೆ ಮಾಡುತ್ತಿರುವ ತಾರತಮ್ಯ–ಅನ್ಯಾಯ ಎಂದು ಹೇಳಿತು. ಅಂತೆಯೇ, ನಮ್ಮ ಪಾಸ್‌ಪೋರ್ಟ್, ವೋಟರ್ ಕಾರ್ಡ್, ಶಾಲಾ ದಾಖಲೆಗಳು, ಹೀಗೆ ಎಲ್ಲಾ ಕಡೆ ಮೂರನೆಯ ಲಿಂಗದವರಾಗಿ ಗುರುತಿಸಿಕೊಳ್ಳುವ ಅವಕಾಶ ಇರಬೇಕು ಎಂದು ಹೇಳಿತು.

2019ರಲ್ಲಿ ಕಾನೂನಾಗಿ ರೂಪಿಸಲಾದ ಮೂರನೆಯ ಲಿಂಗಕ್ಕೆ ಸೇರಿದ ವ್ಯಕ್ತಿಗಳ ಹಕ್ಕುಗಳ ರಕ್ಷಣಾ ಕಾಯಿದೆ, ಮೂರನೆಯ ಲಿಂಗಕ್ಕೆ ಸೇರಿದ ವ್ಯಕ್ತಿಗಳಿಗೆ ಸಮಾನವಾದ ಮೂಲಭೂತ ಹಕ್ಕುಗಳಿವೆ. ಅಂತಹ ವ್ಯಕ್ತಿಗಳ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆಸುವುದು ಅಪರಾಧ ಎಂದು ಕಾನೂನು ಹೇಳಿದೆ. ಹುಟ್ಟಿನ ಲಿಂಗದಲ್ಲಿ, ಲಿಂಗರೂಪದಲ್ಲಿ ತನ್ನನ್ನು ಗುರುತಿಸಿಕೊಳ್ಳದ ವ್ಯಕ್ತಿಯನ್ನು (ನಂತರ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೂ ಅಥವಾ ಮಾಡಿಸಿಕೊಳ್ಳದಿದ್ದರೂ) ಮೂರನೆಯ ಲಿಂಗಕ್ಕೆ ಸೇರಿದ ವ್ಯಕ್ತಿಯಾಗಿ (ತೃತೀಯಲಿಂಗಿ) ಗುರುತಿಸುವುದಾಗಿ ಹೇಳಿದೆ. ಅಂತಹ ವ್ಯಕ್ತಿಗಳು ಕಾಯಿದೆಯಲ್ಲಿ ಹೇಳಿರುವ ವಿಧಾನ ಅನುಸರಿಸಿ ಜಿಲ್ಲಾ ದಂಡಾಧಿಕಾರಿಗೆ (ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್) ಅರ್ಜಿ ಸಲ್ಲಿಸಿ ತೃತೀಯಲಿಂಗಿಯಾಗಿ ಗುರುತಿಸಿಕೊಳ್ಳಬಹುದು ಎಂದು ನಮೂದಿಸಿದೆ.

ಲಿಂಗಬೇಧ ಒಂದು ವಿಷಯವಾದರೆ, ಒಬ್ಬ ವ್ಯಕ್ತಿಯ ಲೈಂಗಿಕ ಆಸಕ್ತಿ ಹಾಗೂ ಆಯ್ಕೆಯ ಹಕ್ಕು ಇನ್ನೊಂದು ವಿಷಯ. ಒಬ್ಬ ವ್ಯಕ್ತಿ ತನ್ನ ಲಿಂಗ ಹಾಗೂ ಲಿಂಗರೂಪವನ್ನು ತಾನೇ ನಿರ್ಧರಿಸಬೇಕು. ಹಾಗೆಯೇ ತನ್ನ ಲೈಂಗಿಕ ಆಸಕ್ತಿ ಯಾವ ಲಿಂಗದ ವ್ಯಕ್ತಿಗಳ ಮೇಲಿದೆ ಎಂಬುದನ್ನು ನಿರ್ಧರಿಸಿ, ಪೂರ್ಣ ಸ್ವಾತಂತ್ರ್ಯದಿಂದ ಜೀವಿಸುವುದು ಪ್ರತಿಯೊಬ್ಬ



ವ್ಯಕ್ತಿಯ ವೈಯಕ್ತಿಕ ವಿಷಯ; ಸ್ವಂತ ಆಯ್ಕೆ; ಅದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. ಅಂದರೆ, ಒಬ್ಬ ವ್ಯಕ್ತಿ ಯಾವುದೇ ಲಿಂಗಕ್ಕೆ ಸೇರಿದವರಾಗಿದ್ದರೂ, ಆ ವ್ಯಕ್ತಿಯ ಲೈಂಗಿಕ ಆಸಕ್ತಿ ಗಂಡಿನ ಮೇಲೆ ಇರಬಹುದು; ಹೆಣ್ಣಿನ ಮೇಲೆ ಇರಬಹುದು ಅಥವಾ ಎರಡೂ ಲಿಂಗದ ವ್ಯಕ್ತಿಗಳ ಮೇಲೆ ಇರಬಹುದು. ಇದೂ ಸಹ ಒಬ್ಬ ವ್ಯಕ್ತಿಯ ಹಕ್ಕು.

'ಗಂಡು ಇನ್ನೊಬ್ಬ ಗಂಡಿನೊಂದಿಗೆ, ಹಾಗೆಯೇ ಹೆಣ್ಣು ಇನ್ನೊಬ್ಬ ಹೆಣ್ಣಿನೊಂದಿಗೆ ನಡೆಸುವ ಲೈಂಗಿಕ ಕ್ರಿಯೆ ಅಸಹಜ, ಹಾಗೂ ಪ್ರಕೃತಿಯ ವಿರುದ್ಧ' ಎನ್ನುತ್ತದೆ ಐಪಿಸಿ ಸೆ.377. ದೇಶದ ಬೇರೆ ಬೇರೆ ಹೈಕೋರ್ಟ್‌ಗಳಲ್ಲಿ ಸಲ್ಲಿಸಲಾದ ಹಲವು ಪಿಟಿಶನ್‌ಗಳ ಮೂಲಕ, ಹಲವಾರು ವರ್ಷಗಳ ಹೋರಾಟದ ನಂತರ, 'ಪರಸ್ಪರ ಒಪ್ಪಿಗೆಯಿಂದ 18 ವರ್ಷಕ್ಕೆ ಮೇಲ್ಪಟ್ಟ ಇಬ್ಬರು ವಯಸ್ಕರ ನಡುವೆ ನಡೆಯುವ ಯಾವುದೇ ಲೈಂಗಿಕ ಕ್ರಿಯೆಯನ್ನು, ಕ್ರೈಂ ಎಂದು ಪರಿಗಣಿಸುವುದು ಸಂವಿಧಾನದ ವಿರುದ್ಧ' ಎಂದು 2017ರಲ್ಲಿ ಸುಪ್ರೀಂ ಕೋರ್ಟ್ ಹೇಳಿತು.

## ಅಪರಿಪೂರ್ಣ ಕಾಯಿದೆ

ಕಾಯ್ದೆ ಕಾನೂನುಗಳಲ್ಲೂ ಹಲವು ನ್ಯೂನ್ಯತೆಗಳಿವೆ. ಲಿಂಗಪ್ರಬೇಧಗಳ ಬಗ್ಗೆ ಕಾಯ್ದೆಯಲ್ಲೇ ಗೊಂದಲವಿದೆ. ಲಿಂಗ ಬದಲಿಸಿಕೊಂಡ ವ್ಯಕ್ತಿಗಳನ್ನೂ, ಮೂರನೆಯ ಲಿಂಗದವರಾಗಿ ಹುಟ್ಟಿದ ವ್ಯಕ್ತಿಗಳನ್ನೂ ಈ ಕಾನೂನು ಪ್ರತ್ಯೇಕಿಸಿಲ್ಲ. ಹಾಗೆಯೇ ಮೂರನೆಯ ಲಿಂಗಕ್ಕೆ ಸೇರಿದ ವ್ಯಕ್ತಿಗಳ ಹಕ್ಕುಗಳನ್ನು, ಇನ್ನಷ್ಟು ಕಾನೂನು ವ್ಯವಸ್ಥೆಗಳ ಪ್ರಕ್ರಿಯೆಗೆ ಒಳಪಡಿಸಿದೆ. ಇದು ಈ ಮೊದಲೇ ಹಲವಾರು ದೌರ್ಜನ್ಯಗಳಿಗೆ ಒಳಗಾಗಿರುವ ಈ